ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ವೀರೇಶ್ ಆರ್. | ಪಿ.ಡಬ್ಲ್ಯೂ. | 10 |
| ತಂದೆಯ ಹೆಸರು | : | ರುದ್ರಯ್ಯ | ಸಿ.ಡಬ್ಲ್ಯೂ. | 18 |
| ವಯಸ್ಸು | : | 39 ವರ್ಷ | | |
| ಉದ್ಯೋಗ | : | ವೃತ್ತ ನಿರೀಕ್ಷಕರು, ಹಾನಗಲ್ ವೃತ್ತ, ಹಾವೇರಿ ಜಿಲ್ಲೆ. | | |
| ವಾಸ ಸ್ಥಳ | : | ಹಾನಗಲ್. | | |

ದಿ.23.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)** ಃ

1. ದಿ.25.11.2019 ರಿಂದ 02.06.2021 ರ ವರೆಗೆ ಕೆ.ಟಿ.ಜೆ.ನಗರ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.26.12.2019 ರಂದು ಬೆಳಿಗ್ಗೆ 11.00 ಗಂಟೆಗೆ ಠಾಣಾ ಕರ್ತವ್ಯದಲ್ಲಿದ್ದಾಗ, ಜಿಲ್ಲಾ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಯಾದ ಚಾಸಾ-1 ರವರು ಠಾಣೆಗೆ ಹಾಜರಾಗಿ ನಿಪಿ-3 ರಂತೆ ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದ ಮೇರೆಗೆ ಪ್ರಕರಣವನ್ನು ದಾಖಲಿಸಿ, ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ನಿಪಿ-3 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-3(ಎ)** ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಚಾಸಾ-1 ರವರ ಸಹಿಯನ್ನು ಸಾಕ್ಷಿಯು ಗುರುತಿಸಿದ್ದು, ಚಾಸಾ-1 ರವರ ಸಹಿಯನ್ನು **ನಿಪಿ-3(ಬಿ)** ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು **ನಿಪಿ- 37** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-37(ಎ)** ಎಂದು ಗುರುತಿಸಲಾಯಿತು.

3. ನಂತರ ಮಧ್ಯಾಹ್ನ 3.20 ರ ಸುಮಾರಿಗೆ ಚಾಸಾ-1 ರವರು 3 ಜನ ಆರೋಪಿತರನ್ನು ಕೃತ್ಯದಲ್ಲಿ ವಶಪಡಿಸಿಕೊಂಡ ಮಾಲು, ಪಂಚನಾಮೆ, ಒಂದು ಲಿಖಿತ ವರದಿಯನ್ನು ತಯಾರು ಮಾಡಿಕೊಂಡು ನೀಡಿದ್ದು, ನಾನು 3.30 ಕ್ಕೆ ಸ್ವೀಕರಿಸಿ, ಆರೋಪಿತರನ್ನು ವಿಚಾರಣೆ ಮಾಡಿದ್ದು, ಅವರ ಸ್ವಇಚ್ಛಾ

ಹೇಳಿಕೆಗಳನ್ನು ಪಡೆದುಕೊಂಡೆನು. ಅವರು ತಮ್ಮ ಹೇಳಿಕೆಗಳಲ್ಲಿ ತಾವು ಶಿಗ್ಗಾವಂ ತಾಲ್ಲೂಕಿನ ಶಿಶುವಿನಾಳದ ಬಳಿ ಅಮವಾಸ್ಯೆ ಸಮಯದಲ್ಲಿ ಬರುವ ಪಕ್ಕೀರರ ಬಳಿ ಕಡಿಮೆ ಹಣಕ್ಕೆ ಅವರಿಂದ ಗಾಂಜಾವನ್ನು ಖರೀದಿಸಿ ತಂದು ಹೆಚ್ಚಿನ ಬೆಲೆಗೆ ಮಾರುತ್ತಿದ್ದುದಾಗಿಯೂ, ನೀವು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದರೆ ಗಾಂಜಾವನ್ನು ಖರೀದಿಸಿ ತಂದ ಸ್ಥಳವನ್ನು ತೋರಿಸುವುದಾಗಿ ತಿಳಿಸಿದರು. ಚಾಸಾ-1 ರವರು ಹಾಜರುಪಡಿಸಿದ ವರದಿಯನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿದ್ದು, ಈ ಸಾಕ್ಷಿಯ ಸಹಿಯನ್ನು **ನಿಪಿ-22(ಬಿ)** ಎಂದು ಗುರುತಿಸಲಾಯಿತು.

4. ಆರೋಪಿ1 ರಿಂದ 3 ರವರ ಸ್ವಇಚ್ಛಾ ಹೇಳಿಕೆಗಳನ್ನು **ನಿಪಿ-38** ರಿಂದ **ನಿಪಿ-40** ಎಂದು ಗುರುತಿಸಲಾಯಿತು. ಆರೋಪಿತರ ಸಹಿಗಳನ್ನು ಕ್ರಮವಾಗಿ **ನಿಪಿ-38(ಎ) ರಿಂದ ನಿಪಿ-40(ಎ)** ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ-38(ಬಿ) ದಿಂದ ನಿಪಿ-40(ಬಿ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 3 ಜನ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

5. ದೂರಿನೊಂದಿಗೆ ಹಾಜರುಪಡಿಸಿದ ವಶಪಡಿಸಿಕೊಂಡ ಮಾಲುಗಳನ್ನು ಮಾಲಪಟ್ಟಿ ಸಂಖ್ಯೆ 111/2019 ರಲ್ಲಿ ಅಳವಡಿಸಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಈಗಾಗಲೇ ಎಂ.ಓ.1, ಎಂ.ಓ.3 ಮತ್ತು ಎಂ.ಓ.4 ಎಂದು ಗುರುತಿಸಲಾದ ಮುದ್ದೆಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಎಂ.ಓ.2 ಎಂದು ಗುರುತಿಸಲಾದ ನಗದು ಹಣ ಖಜಾನೆಯಲ್ಲಿರುತ್ತದೆ.

6. ನಂತರ ಸಾಕ್ಷಿದಾರರಾದ ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ನಂತರ ಆರೋಪಿತರನ್ನು ಸೂಕ್ತ ಬೆಂಗಾವಲಿನೊಂದಿಗೆ ಠಾಣೆಯಲ್ಲಿ ಇರಿಸಿಕೊಂಡೆನು.

7. ದಿ.27.12.2019 ರಂದು ಪಂಚರಾದ ಚಾಸಾ-5 ಮತ್ತು ಚಾಸಾ-6 ರವರಿಗೆ ಠಾಣೆಗೆ ಕರೆಸಿಕೊಂಡು ನೋಟೀಸು ನೀಡಿ, ಅವರಿಗೆ ಪಂಚರಾಗಿ ಸಹಕರಿಸಲು ಕೋರಿರುತ್ತೇನೆ. ಸದರಿ ನೋಟೀಸುಗಳನ್ನು **ನಿಪಿ.41 ಮತ್ತು ನಿಪಿ-42** ಎಂದು ಗುರುತಿಸಲಾಯಿತು. ನಂತರ ಆರೋಪಿತರು ಗಾಂಜಾವನ್ನು ಖರೀದಿಸಿ ತಂದ ಸ್ಥಳವನ್ನು ತೋರಿಸುತ್ತೇವೆ ಎಂದು ತಿಳಿಸಿದ ಸ್ಥಳಕ್ಕೆ ಪಂಚರೊಂದಿಗೆ ನಮ್ಮ ಇಲಾಖಾ ವಾಹನದಲ್ಲಿ

ಆರೋಪಿತರು, ಸಿಬ್ಬಂದಿಗಳು ಪಂಚರೊಂದಿಗೆ ಪ್ರಯಾಣ ಬೆಳೆಸಿದೆವು. ಆರೋಪಿತರು ತೋರಿಸಿದ ಮಾರ್ಗದಲ್ಲಿ ಹೋಗಿದ್ದು, ಅವರು ಶಿಶುವಿನಾಳ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು, ಆಗ ಸಮಯ ಸುಮಾರು ಬೆಳಿಗ್ಗೆ 10.30 ಆಗಿತ್ತು. ನಂತರ ಆರೋಪಿತರು ಗಾಂಜಾವನ್ನು ಖರೀದಿಸಿದ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳದಲ್ಲಿ ನಿಪಿ-33 ರಂತೆ ಬೆಳಿಗ್ಗೆ 10.45 ರಿಂದ 11.45 ರವರೆಗೆ ಪಂಚನಾಮೆ ಕ್ರಮ ಜರುಗಿಸಲಾಯಿತು. ನಿಪಿ-33 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ಮತ್ತು ಆರೋಪಿತರ ಸಹಿಗಳನ್ನು ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು **ನಿಪಿ-33(ಬಿ)** ಎಂದು, 1 ನೇ ಆರೋಪಿಯ ಸಹಿಯನ್ನು **ನಿಪಿ.33(ಸಿ)** ಎಂದು, 2 ನೇ ಆರೋಪಿಯ ಸಹಿಯನ್ನು **ನಿಪಿ-33(ಡಿ)** ಎಂದು, 3 ನೇ ಆರೋಪಿಯ ಸಹಿಯನ್ನು **ನಿಪಿ-33(ಇ)** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ-34 ರಂತೆ ಫೋಟೋ ತೆಗೆಸಿರುವುದಾಗಿ ತಿಳಿಸಿರುತ್ತಾರೆ.

8. ನಂತರ ಠಾಣೆಗೆ ಹಾಜರಾಗಿ ಆರೋಪಿತರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನಂತರ ಅದೇ ದಿನ ನ್ಯಾಯಾಧೀಶರ ಸಮ್ಮುಖದಲ್ಲಿ ಕಲಂ 52 ಎ(3) ರ ಎನ್.ಡಿ.ಪಿ.ಎಸ್. ರೀತ್ಯ ಇನ್‌ವೆಂಟರಿ ಮಾಡಿಸಿ, ಸರ್ಟಿಫಿಕೇಟ್ ಪಡೆದಿರುತ್ತೇನೆ. ಅನೆಕ್ಷರ್-1 ನ್ನು **ನಿಪಿ-43** ಎಂದು, ಕಲಂ 52 ಎ(3) ರ ಸರ್ಟಿಫಿಕೇಟ್ ನ್ನು **ನಿಪಿ-44** ಎಂದು, ಇನ್ನೊಂದು ಸರ್ಟಿಫಿಕೇಟ್ ನ್ನು **ನಿಪಿ-45** ಎಂದು ಗುರುತಿಸಲಾಯಿತು. ಎಂ.ಓ.5 ಮತ್ತು ಎಂ.ಓ.6 ಎಂದು ಗುರುತಿಸಲಾದ ಮುದ್ದೆಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಆ ಸಂದರ್ಭದಲ್ಲಿ ತೆಗೆದ ನಿಪಿ-25 ರಿಂದ ನಿಪಿ-30 ಎಂದು ಗುರುತಿಸಲಾದ ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

9. ಚಾಸಾ-17 ರವರು ಇನ್ ವೆಂಟರಿ ಸಂಬಂಧಪಟ್ಟಂತೆ ನಿಪಿ-31 ಎಂದು ಗುರುತಿಸಲಾದ ಕಲಂ 65 ಬಿ ಸಾಕ್ಷ್ಯ ಅಧಿನಿಯಮ ರೀತ್ಯ ಪ್ರಮಾಣ ಪತ್ರವನ್ನು ಪಡೆದಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-31(ಬಿ)** ಎಂದು ಗುರುತಿಸಲಾಯಿತು. ಫೋಟೋಗಳನ್ನು ನಿಪಿ-32 ಎಂದು ಗುರುತಿಸಲಾದ ಡಿ.ವಿ.ಡಿ.ಗೆ ಅಳವಡಿಸಿರುತ್ತೇನೆ.

10. ಇನ್ ವೆಂಟರಿ ಮಾಡಿಕೊಂಡ ಗಾಂಜಾವನ್ನು ಪಿ.ಎಫ್. 113/2019 ರಲ್ಲಿ ಅಳವಡಿಸಿರುತ್ತೇನೆ. ಅದೇ ದಿನ ಮಾನ್ಯ ಎಸ್.ಪಿ.ಯವರಿಗೆ ರೇಡ್ ಸಕ್ಸಸ್ ವರದಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ದಿ.30.12.2019 ರಂದು ಇನ್ ವೆಂಟರಿಯಿಂದ ತೆಗೆದ ಗಾಂಜಾವನ್ನು ಎಫ್.ಎಸ್.ಎಲ್. ಬೆಂಗಳೂರಿಗೆ ಕಳುಹಿಸಿಕೊಟ್ಟು ಅವರಿಂದ ಸ್ವೀಕೃತಿಯನ್ನು ಪಡೆದಿರುತ್ತೇನೆ. ಸದರಿ ಸ್ವೀಕೃತಿಯನ್ನು **ನಿಪಿ-46** ಎಂದು ಗುರುತಿಸಲಾಯಿತು.

ನಂತರ ಸಾಕ್ಷಿದಾರರಾದ ಚಾಸಾ-9 ರಿಂದ ಚಾಸಾ-16 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ದಿ.16.03.2020 ರಂದು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಅನುಮತಿ ಪಡೆದು ಸದರಿ ಗಾಂಜಾವನ್ನು ನಾಶಪಡಿಸಲು ಕಮಿಟಿ ಕಳುಹಿಸಿರುತ್ತೇನೆ.

11. ದಿ.21.09.2020 ರಂದು ಎಫ್.ಎಸ್.ಎಲ್. ವರದಿಯನ್ನು ನಿಪಿ-23 ರಂತೆ ಹಾಗೂ ಮಾದರಿ ಸೀಲನ್ನು ನಿಪಿ-24 ರಂತೆ ಸ್ವೀಕರಿಸಿ, ಕಡತಕ್ಕೆ ಅಳವಡಿಸಿರುತ್ತೇನೆ. ತನಿಖೆಯನ್ನು ಪೂರೈಸಿ, ಆರೋಪ ದೃಢಪಟ್ಟಿದ್ದರಿಂದ ಆರೋಪಿತರ ವಿರುದ್ಧ ದಿ.03.10.2020 ರಂದು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು : ಶ್ರೀ ಕೆ.ಎಚ್.ವಿ, ವಕೀಲರಿಂದ ಆರೋಪಿತರ ಪರವಾಗಿ** :

12. ಈ ಪ್ರಕರಣ ದಾಖಲಾದ ನಂತರದಲ್ಲಿ ನಾನು ಒಂದು ವರ್ಷದ ವರೆಗೆ ಕೆ.ಟಿ.ಜೆ. ನಗರ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

13. ಪಿ.ಎಫ್.111/2019 ರಲ್ಲಿ ವಶಪಡಿಸಿಕೊಂಡ ಮುದ್ದೆಮಾಲುಗಳ ಬಗ್ಗೆ ಇನ್ ವೆಂಟರಿ ಮಾಡಿಸಿರುತ್ತೇನೆ. ನಿಪಿ-45 ರಲ್ಲಿ ಪಿ.ಎಫ್. ಸಂಖ್ಯೆ 101/2018 ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಕಣ್ತಪ್ಪಿನಿಂದ ಆಗಿರಬಹುದು ಎಂದು ಹೇಳುತ್ತಾರೆ.

14. ಚಾಸಾ-1 ರವರು ಆರೋಪಿತರ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಹಾಗೂ

ಮುದ್ದೆಮಾಲುಗಳನ್ನು ವಶಪಡಿಸಿಕೊಂಡ ಸಂದರ್ಭದಲ್ಲಿ ನಾನು ಖುದ್ದು ಹಾಜರಿರಲಿಲ್ಲ ಎನ್ನುವುದು ಸರಿ. ನಿಪಿ-11 ರಿಂದ ನಿಪಿ-21 ಎಂದು ಗುರುತಿಸಲಾದ ಪೋಟೋಗಳನ್ನು ದೂರಿನೊಂದಿಗೆ ಹಾಜರುಪಡಿಸಿರುತ್ತಾರೆ.

15. ಆರೋಪಿತರು ಶಿಶುವಿನಾಳ ಗ್ರಾಮಕ್ಕೆ ನಮ್ಮನ್ನು ಕರೆದುಕೊಂಡ ಹೋಗಿದ್ದಾರೆಂದು ಹೇಳುವ ಸ್ಥಳದಲ್ಲಿ ಮನೆಗಳು ಮತ್ತು ವ್ಯಾಪಾರದ ಮಳಿಗೆಗಳು ಇವೆ. ಪಂಚನಾಮೆಯ ಸಮಯದಲ್ಲಿ ಸ್ಥಳೀಯ ವ್ಯಕ್ತಿಗಳನ್ನು ಪಂಚನಾಮೆ ಸಾಕ್ಷಿದಾರರನ್ನಾಗಿ ಮಾಡಿಲ್ಲ. ಸಾಕ್ಷಿ ಮುಂದುವರಿದು, ಸ್ಥಳೀಯರಾದ ವೀರಯ್ಯ ಬಿನ್ ಶಿವಬಸವಯ್ಯ, ಚನ್ನಬಸವಯ್ಯ ಶಂಕರಯ್ಯ ಮುಳಕೋಡಿ, ಬಸವನಗೌಡ ಬಿನ್ ವೆಂಕನಗೌಡ ರವರನ್ನು ವಿಚಾರಣೆ ಮಾಡಿರುತ್ತೇನೆ. ಸದರಿ ಮೂವರು ವ್ಯಕ್ತಿಗಳ ಹೇಳಿಕೆಗಳನ್ನು ಪಡೆದು ಅವರುಗಳನ್ನು ಸಾಕ್ಷಿದಾರರನ್ನಾಗಿ ಪರಿಗಣಿಸಿ, ದೋಷಾರೋಪಣಾ ಪಟ್ಟಿಯೊಂದಿಗೆ ಅವರ ಹೇಳಿಕೆಗಳನ್ನು ಸಲ್ಲಿಸಿಲ್ಲ.

16. ಆರೋಪಿತರು ಗಾಂಜಾವನ್ನು ಫಕ್ಕೀರರಿಂದ ಖರೀದಿ ಮಾಡಿದ್ದಾಗಿ ಹೇಳಿದರು ಮತ್ತು ಒಂದು ಕೆ.ಜಿ. ಗಾಂಜಾಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟು ಖರೀದಿ ಮಾಡಿದ್ದೇವೆಂದು ಹೇಳಿದರು. ಸಾಧು ಸಂತರಿಗೆ ಫಕ್ಕೀರ ಎಂದು ಕರೆಯುತ್ತಾರೆ ಎಂದರೆ ಸರಿ.

17. ಆರೋಪಿತರು ಗಾಂಜಾ ಖರೀದಿಸಿದ ಫಕ್ಕೀರರನ್ನು ದಸ್ತಗಿರಿ ಮಾಡಲು ಪ್ರಯತ್ನಪಟ್ಟಿದ್ದು, ಅವರು ಸಿಕ್ಕಿಲ್ಲ. ನಾನು ಕೆ.ಟಿ.ಜೆ. ನಗರ ಪೋಲೀಸ್ ಠಾಣೆಯಲ್ಲಿ ಈ ಪ್ರಕರಣದ ಆದ ನಂತರ ಒಂದು ವರ್ಷದವರೆಗೂ ಕರ್ತವ್ಯ ನಿರ್ವಹಿಸಿದ್ದರೂ ಸಹ ಸದರಿ ಫಕ್ಕೀರರನ್ನು ಪತ್ತೆಹಚ್ಚಲು ಸಾಧ್ಯವಾಗಿಲ್ಲ.

18. ಕೆಂಪು ಮತ್ತು ಹಳದಿ ಬಣ್ಣದ ಚೀಲ (ಮುದ್ದೆಮಾಲುಗಳು) ಗಳ ಮೇಲೆ ಪಂಚರ ಸಹಿಗಳು ಇದ್ದವು. ಸಾಕ್ಷಿಯು ಮುಂದುವರಿದ ಪುನಃ ಹೇಳುತ್ತಾರೆ ಚೀಲಗಳ ಮೇಲೆ ಅಂಟಿಸಿರುವ ಚೀಟಿಗಳಲ್ಲಿ ಸಹಿಗಳು ಇರುತ್ತವೆ ಎಂದು ಹೇಳುತ್ತಾರೆ. ಯಾವ ಚೀಲದ ಮೇಲೆ ಚೀಟಿ ಅಂಟಿಸಿದ್ದಾರೆ ಎಂದರೆ

ಸಾಕ್ಷಿಯು ಎರಡೂ ಚೀಲಗಳನ್ನು ಕಟ್ಟಿ ಅದರ ಮೇಲೆ ಚೀಟಿಗಳನ್ನು ಅಂಟಿಸಿದ್ದಾರೆ ಎಂದು ಹೇಳುತ್ತಾರೆ. ಸದರಿ ಚೀಟಿ ಈ ಹಿಂದೆ ಸದರಿ ಚೀಲಗಳ ಮೇಲೆ ಅಂಟಿಸಿರಲಿಲ್ಲ, ಈ ದಿನ ಇದನ್ನು ತಂದು ಹಾಜರುಪಡಿಸಿದ್ದು ಎಂದರೆ ಸರಿಯಲ್ಲ.

19. ನಾವು ಅಮವಾಸ್ಯೆ ದಿನ ಹೋಗಿ ಸಾದು ಸಂತರನ್ನು ಪತ್ತೆ ಹಚ್ಚಲು ಪ್ರಯತ್ನ ಪಟ್ಟಿದ್ದೇವೆ. ಚಾಸಾ.1 ರವರು ನನ್ನ ಮುಂದೆ ತಂದು ಹಾಜರುಪಡಿಸಿದ ವಸ್ತುಗಳು ಗಾಂಜಾ ವಸ್ತುಗಳು ಹೌದೋ ಅಲ್ಲವೋ ಎಂದು ನಾನು ಪರಿಣಿತರನ್ನು ಕರಿಸಿ ಖಚಿತ ಪಡಿಸಿಕೊಂಡಿರುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ಸದರಿ ಮುದ್ದೆ ಮಾಲು ಗಳು ಸೀಲ್ ಆಗಿತ್ತು ಎಂದು ಹೇಳುತ್ತಾರೆ. ಸದರಿ ವಸ್ತುಗಳು ಸೀಲ್ ಆಗಿದ್ದರಿಂದ ಅದರಲ್ಲಿ ಏನು ಇದೆ ಎಂದು ನನಗೆ ಗೊತ್ತಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಮುದ್ದೆ ಮಾಲುಗಳನ್ನು ಇನ್ವೆಂಟರಿ ಮಾಡಿಸಿದ ಸಂದರ್ಭದಲ್ಲಿ ತೆರೆದು ನೋಡಿದಾಗ ಅದರಲ್ಲಿ ಮೇಲ್ನೋಟಕ್ಕೆ ಗಾಂಜಾ ಇರುವುದು ಕಂಡು ಬಂತು ಎಂದು ಹೇಳುತ್ತಾರೆ.

20. ಚಾಸಾ.1 ರವರು ವರದಿ ತಂದು ಹಾಜರುಪಡಿಸಿದ್ದರ ಹೊರತಾಗಿ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಶಿಶುವಿನಾಳ ಗ್ರಾಮಕ್ಕೆ ಹೋಗಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

21. ಆರೋಪಿತರು ಯಾವುದೇ ಅಪರಾದ ಮಾಡಿಲ್ಲ ಎಂದು ತನಿಖೆಯಲ್ಲಿ ಕಂಡು ಬಂದಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.